







ವಾಸಿಸುತ್ತಿದ್ದಾರೆ. ಪ್ರತಿಯೊಂದು ಮನೆಯೂ ಬಹುತೇಕ ಒಂದೇ ವಿನ್ಯಾಸವನ್ನು ಹೊಂದಿದ್ದು, ಆಕರ್ಷಣೀಯವಾಗಿವೆ. ಮನೆಯ ಬಣ್ಣಕ್ಕೆ ಸರಿಹೊಂದುವಂತಹ ಹೆಸರುಗಳನ್ನು ಇಡಲಾಗಿದೆ.

ಈ ಪ್ರದೇಶಕ್ಕೆ 1880ರಲ್ಲಿ 'ಕಾಟೇಜ್ ಸಿಟಿ' ಎಂದು ನಾಮಕರಣ ಮಾಡಲಾಯಿತಾದರೂ, 1907ರಲ್ಲಿ 'ಓಕ್ ಬ್ಲಫ್ಸ್' ಎಂದು ಮರು ನಾಮಕರಣ ಮಾಡಲಾಯಿತು. ಆದರೆ ಇಂದಿಗೂ ಪ್ರವೇಶ ದ್ವಾರದ ಕಮಾನಿನಲ್ಲಿ 'ಕಾಟೇಜ್ ವಿಲೇಜ್' ಎಂಬ ಹೆಸರನ್ನೇ ಉಳಿಸಿಕೊಳ್ಳಲಾಗಿದೆ. ಈ ಪ್ರದೇಶದಲ್ಲಿ ಸಾಕಷ್ಟು ಓಕ್ ಮರಗಳು ಇರುವುದರಿಂದ 'ಓಕ್ ಬ್ಲಫ್ಸ್' ಎಂಬ ಹೆಸರು ಬಂದಿರಲೂಬಹುದು. ಪ್ರಸ್ತುತ 34 ಎಕರೆ ಪ್ರದೇಶದಲ್ಲಿ 318 ವಿಕ್ಟೋರಿಯನ್ ಕುಟೀರಗಳು ಹಾಗೂ ಮೆಥೋಡಿಸ್ಟ್ ಚರ್ಚ್ ಇದೆ. ಜನರ ಬಾಯಲ್ಲಿ 'ಕಾಟೇಜ್ ವಿಲೇಜ್' ಎಂದೇ ಪ್ರಖ್ಯಾತವಾಗಿರುವ ಈ ಮನೆಗಳ ಸಮೂಹವನ್ನು ಅತ್ಯುತ್ತಮವಾಗಿ ಸಂರಕ್ಷಿಸಿಡಲಾಗಿದೆ.

ಒಂದು ಪುಟ್ಟ ಮನೆಯ ಮುಂದೆ 'ಕಾಟೇಜ್ ಮ್ಯೂಸಿಯಂ' ಎಂಬ ನಾಮಫಲಕ ಹಾಕಲಾದ ನಮ್ಮನ್ನು ಆಕರ್ಷಿಸಿತು. 1800ರ ಸುಮಾರಿನಲ್ಲಿ ನಿರ್ಮಿಸಲಾದ ಈ ಮನೆಯನ್ನು ಸುಮಾರು 80 ವರ್ಷದ ವೃದ್ಧೆ ಲೂಸಿ ಅವರು ತಮ್ಮ ಹಿರಿಯರ ನೆನಪಿಗಾಗಿ 'ಮ್ಯೂಸಿಯಂ' ಆಗಿ ಪರಿವರ್ತಿಸಿದ್ದಾರೆ. ಇದರ ಒಡತಿ ಹಾಗೂ ಗೈಡ್ ಆಗಿರುವ ಲೂಸಿ ಭಾವುಕತೆಯಿಂದ ಪ್ರತಿಯೊಂದು ವಸ್ತುವಿನ ಬಗ್ಗೆ ವಿವರಿಸಿದರು. ಇಲ್ಲಿರುವ ನಾಲ್ಕು ತಲೆಮಾರಿನ ವಸ್ತುಗಳ ಸಂಗ್ರಹವನ್ನು ನೋಡಿದರೆ ಎಂತಹವರೂ ಬೆರಗಾಗುತ್ತಾರೆ. ಗ್ರಾಮೊಫೋನ್ ರೆಕಾಡ್ ಪ್ಲೇಯರ್, ಸ್ಪೀಕರ್ ಬಾಕ್ಸ್, ಮನೆಯನ್ನು ಬೆಚ್ಚಗಿರಿಸಲು ಉಪಯೋಗಿಸುವ ಓವನ್, ಮಾರ್ಥಾಸ್ ವಿನಿಯಾರ್ಡ್ ಸುದ್ದಿಗಳ ಶತಮಾನಕ್ಕೂ ಹಿಂದಿನ ಪತ್ರಿಕೆಗಳು, ಕೈ ಗವಸುಗಳು, ಶೂ, ಹ್ಯಾಟ್, ಹೆಂಗಸರ ಸಾಂಪ್ರದಾಯಕ ಉಡುಪುಗಳು, ಪಿಂಗಾಣಿ ಪಾತ್ರೆಗಳು, ಟೀಪಾಟ್‌ಗಳು, ಮೂರು ತಲೆಮಾರುಗಳ ಹಿರಿಯರು ಉಪಯೋಗಿಸಿದ ಮಂಚಗಳು, 1845ರಲ್ಲಿ ತಯಾರಾದ ಪ್ರಸಿದ್ಧ ಕಂಪೆನಿಯ ಸೇಲಂ ರಾಕಿಂಕ್ ಚೇರ್, ಹರಾಜಿನಲ್ಲಿ ಖರೀದಿಸಿದ ಅಮೆರಿಕದ ಅಧ್ಯಕ್ಷ ವಿಲಿಯಂ ಜೆಫ್ಫರ್‌ಸನ್ ಕ್ಲಿಂಟ್ ಉಪಯೋಗಿಸಿದ ಕುರ್ಚಿ ಹಾಗೂ ಸ್ತುತಿ ಗೀತೆಯ ಪುಸ್ತಕ, ಕಲಾತ್ಮಕ ಬೀಸಣಿಕೆಗಳು, ಪಿಯಾನೋ, ದುರ್ಬೀನು, ಅಂದಿನ ಜೀವನಶೈಲಿಯ ಪೀಠೋಪಕರಣಗಳು... ಹೀಗೆ ನೋಡಿದಷ್ಟೂ ಮುಗಿಯದ ಅಪೂರ್ವ ವಸ್ತುಗಳ ಸಂಗ್ರಹ ಅಲ್ಲಿದೆ.

ಮ್ಯೂಸಿಯಂನ ಒಂದು ಭಾಗದಲ್ಲಿರುವ ಅಂಗಡಿಯಲ್ಲಿ ಕ್ಯಾಂಪ್ ಗ್ರೌಂಡ್‌ಗೆ ಸಂಬಂಧಿಸಿದ ಸ್ಮಾರಕಗಳು, ಮಕ್ಕಳ ಆಟಿಕೆಗಳು, ಹಳೆಯ ಕಾಲದ ಪೋಸ್ಟ್ ಕಾರ್ಡ್‌ಗಳು, ಕಾಗದ ಮತ್ತು ವೆಲ್ವೆಟ್ ಬಟ್ಟೆಯಿಂದ ತಯಾರಿಸಲಾದ ಆಕರ್ಷಕ ಲಾಂದ್ರಗಳು, ಪುಸ್ತಕಗಳು ಹಾಗೂ ಅನೇಕ ರೀತಿಯ ಉಡುಗೊರೆ ವಸ್ತುಗಳನ್ನು ಮಾರಾಟಕ್ಕಿಟ್ಟಿದ್ದಾರೆ. ಇಲ್ಲಿಗೆ ಭೇಟಿ ನೀಡುವ ಪ್ರವಾಸಿಗರು ತಮ್ಮ ನೆಂಟರಿಷ್ಟರಿಗಾಗಿ ಉಡುಗೊರೆಗಳನ್ನು ಕೊಂಡುಕೊಳ್ಳುತ್ತಾರೆ.

ಒಂದೆರಡು ದಿನ ಮಾರ್ಥಾಸ್ ವಿನಿಯಾರ್ಡ್ ದ್ವೀಪದಲ್ಲಿದ್ದುಕೊಂಡು ಅಲ್ಲಿನ ಪ್ರಮುಖ ಸ್ಥಳಗಳನ್ನು ವೀಕ್ಷಿಸಬಹುದು ಮ್ಯಾಸಚೂಸೆಟ್ಸ್ ರಾಜ್ಯದ ಪ್ರಥಮ 'ಲೈಟ್ ಹೌಸ್' ಇರುವ ಎಡ್ಗರ್ ಟೌನ್, ವಿಶಾಲವಾದ ಕಡಲ ಕಿನಾರೆಗಳು, ಜಪಾನೀಯರ ಉದ್ಯಾನ, ಆಕರ್ಷಕ ಮನೆಗಳು, ವಿಶಾಲವಾದ ಬೀದಿಗಳು, ಕುರಿ ಮತ್ತು ಒಂಟೆಯ ಮಿಶ್ರ ತಳಿಯಂತೆ ಕಾಣುವ 'ಆಲ್ಪಾಕಾ' ಪ್ರಾಣಿಗಳನ್ನು ಬೆಳೆಸುತ್ತಿರುವ 'ಐಲ್ಯಾಂಡ್ ಆಲ್ಪಾಕಾ', ಐಷಾರಾಮಿ ಹೋಟೆಲ್ ಗಳು, ನೈಟ್ ಕ್ಲಬ್‌ಗಳು... ಹೀಗೆ ಹಲವು ಆಕರ್ಷಣೆಗಳು ಅಲ್ಲಿವೆ.

ಪ್ರತಿಕ್ರಿಯಿಸಿ: feedback@sudha.co.in